# ಆಹಾ ಸುದ್ದಿ!

★ ಸಸಿತೋಟ




ಉಕ್ರೇನಿನ ಒಲೆಕ್ಸಿಯ್ ಸರ್ಕಸ್‌ಗಾಗಿ ಈ ಸಿಂಹಗಳಿಗೆ ತರಬೇತಿ ನೀಡಿದ್ದರೂ ಸರ್ಕಸ್‌ನ ಟ್ರಿಕ್‌ಗಳಿಗಿಂತ ಹೆಚ್ಚಾಗಿ ನೃತ್ಯ ಮಾಡುವುದು ಅವುಗಳಿಗೆ ಬಲು ಇಷ್ಟವಂತೆ. ಎಷ್ಟೆಂದರೂ ಆಧುನಿಕ ಸಿಂಹಗಳು ನೋಡಿ. ಎಲ್ಲಾ ರೀತಿಯ ಸಂಗೀತಕ್ಕೆ ಅವು ನರ್ತಿಸುತ್ತವೆ ಎಂದು ಒಲೆಕ್ಸಿಯ್ ಕೊಚ್ಚಿಕೊಂಡಿದ್ದಾನೆ. ಆದರೆ ಬಾಲಿವುಡ್ ಗೀತೆಗಳಿಗೆ ಅವು ಸೊಂಟ ಕುಣಿಸುತ್ತವಾ? ತರಬೇತುದಾರನಿಗೆ ಪ್ರಶ್ನೆ ಕೇಳಿದವರು ಯಾರೂ ಇಲ್ಲ.

ಮಿನ್ನೆಸೋಟಾದ 33 ವರ್ಷ ವಯಸ್ಸಿನ ತ್ರಿಶ್ ಎಂಬ ಈ ಮಹಾತಾಯಿಗೆ ಮ್ಯಾರಥಾನ್‌ನಲ್ಲಿ ಓಡುವವರೆಗೂ ತಾನು ತಾಯಿಯಾಗಲಿದ್ದೇನೆ ಎಂಬುದು ಗೊತ್ತೇ ಇರಲಿಲ್ಲವಂತೆ. ಅದೂ 'ಅಜ್ಜಿಯಂದಿರ' ಅರ್ಧ ಮ್ಯಾರಥಾನ್‌ನಲ್ಲಿ 9ನೇ ಮೈಲು ಓಡುತ್ತಿರುವಾಗಲೇ ಹೆಣ್ಣುಮಗುವಿಗೆ ಜನ್ಮ ನೀಡಿದಳಂತೆ. ಈಗ ತಂದೆ- ತಾಯಿ ಇಬ್ಬರಿಗೂ ಥ್ರಿಲ್ ಆಗಿ ಮಗುವಿಗೆ 'ಮಿರ್‍ಯಾಕಲ್'ನ್ನು ಮೊಟಕುಗೊಳಿಸಿ 'ಮಿರಾ' ಎಂಬ ಹೆಸರಿಟ್ಟಿದ್ದಾರಂತೆ. ಅರ್ಧ ಮ್ಯಾರಥಾನ್ ಓಡಿದ್ದಕ್ಕೆ ಒಂದು ಮಗುವಾಯ್ತು. ಇನ್ನು ಪೂರ್ಣ ಮ್ಯಾರಥಾನ್ ಓಡಿದ್ದರೆ ಡಬಲ್ ಧಮಾಕಾ ಇರುತ್ತಿತ್ತೇನೋ!



ಬೊಜ್ಜು ಕರಗಿಸಲು ಏನೆಲ್ಲಾ ಕಸರತ್ತುಗಳು ಮಾರುಕಟ್ಟೆಗೆ ಬಂದಿವೆ. ಅವುಗಳಲ್ಲಿ ಈ ಕಂಪಿಸುವ ಫೋರ್ಕ್ ಇತ್ತೀಚಿನ ಸೇರ್ಪಡೆ. ವೇಗವಾಗಿ ತಿನ್ನುವಾಗ ಈ ಫೋರ್ಕ್ ಕಂಪಿಸಲು ಶುರುವಾಗಿ ಆಹಾರವನ್ನು ಆಚೀಚೆ ಕೆಡವುತ್ತದಂತೆ. ಅಂದರೆ ನಿಮ್ಮ ಹೊಟ್ಟೆಯೂ ಬೊಜ್ಜನ್ನು ಈಚೆಗೆ ಕೆಡವಿ ದೇಹವನ್ನು ಟ್ರಿಮ್ ಮಾಡಿಬಿಡುತ್ತದೆ. ಫ್ರಾನ್ಸ್‌ನ ಹ್ಯಾಪಿಲ್ಯಾಬ್‌ನ ಈ ಅನ್ವೇಷಣೆ ನಿಮ್ಮನ್ನು ಹ್ಯಾಪಿಯಾಗಿ ಮಾಡುತ್ತದೋ ಇಲ್ಲವೋ, 'ಟೇಬಲ್ ಮ್ಯಾನರ್ಸ್' ಇಲ್ಲ ಎಂದು ಬೇರೆಯವರಿಂದ ಬೈಸಿಕೊಳ್ಳುವುದಂತೂ ಇದ್ದೇ ಇದೆ.




ಚೀನಾದಲ್ಲಿ ನಡೆದ ಲೈಂಗಿಕ ಹಗರಣದ ವಿರುದ್ಧ ಪ್ರತಿಭಟನೆಯ ಪರಿಯಿದು. ಆದರೆ ಹೆಸರು ಹೇಳಿಕೊಳ್ಳಲು ಇಚ್ಛಿಸದ ಈ ಕವಿ ನಗ್ನನಾಗಿ ನಡುರಸ್ತೆಯಲ್ಲಿ ನಿಂತಾಗ ಪ್ರತಿಭಟನೆಯ ಕಾವಿಗಿಂತ ಚೋದ್ಯವೇ ಅಧಿಕವಾಯ್ತಂತೆ. ಬೆನ್ನ ಮೇಲೆ ಅನುಕಂಪದ ಬದಲು ಕೀಟಲೆ ಬರಹಗಳು ಬಿದ್ದವಂತೆ. ಮುಂದೆ ಪ್ರತಿಭಟನೆಯ ಬಿಸಿ ಆರಿದಾಗ ಇದೇ ಕಾವ್ಯವಾಗಿ ಪುಸ್ತಕ ರೂಪದಲ್ಲಿ ಈಚೆ ಬರಬಹುದು.

ಥಾಯ್ಲೆಂಡ್‌ನ ಮೃಗಾಲಯದಲ್ಲಿ ಎರಡು ಒರಂಗುಟಾನ್ ಬಾಕ್ಸರ್‌ಗಳು ಟ್ರೋಫಿಗಾಗಿ ಸೆಣೆಸಿದ್ದೇ ಸೆಣೆಸಿದ್ದು. ರೆಫ್ರಿಯೂ ಒರಂಗುಟಾನ್ ಆಗಿದ್ದರೆ ಸರಿ, ಇಲ್ಲದಿದ್ದರೆ ಬಾಕ್ಸರ್‌ಗಳು ಪರಸ್ಪರ ಸೆಣಸುವುದರ ಬದಲು ರೆಫ್ರಿಯ ಮೇಲೆ ದಾಳಿಗೆ ಇಳಿಯುತ್ತಿದ್ದವೇನೋ! ಅಷ್ಟಕ್ಕೂ ಈ ಬಾಕ್ಸಿಂಗ್ ಪಂದ್ಯಕ್ಕೆ ಕೋಟ್ಯಂತರ ಡಾಲರ್ ಬೆಟ್ಟಿಂಗ್ ಇತ್ತಂತೆ. ಕೋತಿ, ಚಿಂಪಾಂಜಿ, ಗೊರಿಲ್ಲಾಗಳ ಬಾಕ್ಸಿಂಗ್ ರಿಂಗಿಗೇ ಕೋಟ್ಯಂತರ ಡಾಲರ್ ಹಣ ಹೂಡಬೇಕಾದರೆ, ಮನುಷ್ಯರ ಕ್ರಿಕೆಟ್ ಮೈದಾನದ ಮೇಲೆ ಇನ್ನೆಷ್ಟು ಬೆಟ್ಟಿಂಗ್ ಇರಲಿಕ್ಕಿಲ್ಲ.

ಹಿಂದೆ ಗೂಢಚಾರಿಕೆಯಲ್ಲಿ ಬೆಲೆವೆಣ್ಣುಗಳು ಬಳಕೆಯಾಗುತ್ತಿದ್ದರಂತೆ. ಕೈತುಂಬ ಹಣ, ಅಷ್ಟೇ ಅಪಾಯವೂ ಇರುತ್ತಿತ್ತು. ಈಗ ಚೀನಾದಲ್ಲಿ ಭ್ರಷ್ಟ ಅಧಿಕಾರಿಗಳ ರಹಸ್ಯವನ್ನು ಅವರವರ ಉಪ ಪತ್ನಿ (ಮಿಸ್ಟ್ರೆಸ್)ಯರು ಯಾರ ಕುಮ್ಮಕ್ಕೂ ಇಲ್ಲದೇ ಅವರಾಗಿಯೇ ಬಹಿರಂಗ ಮಾಡುತ್ತಿದ್ದಾರಂತೆ. ಸರ್ಕಾರಿ ಭದ್ರತಾ ಅಧಿಕಾರಿಗಳು ಮಾಡದ ಕೆಲಸವನ್ನು ಉಪ ಪತ್ನಿಯರು, ನಲ್ಲೆಯರು ಮಾಡುತ್ತಿದ್ದಾರೆ ಬಿಡಿ.

